# ಸರ್ವಶಿಕ್ಷಣ ಅಭಿಯಾನ ಮಿಷನ್-ಕರ್ನಾಟಕ

ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮವು ಒಂದು ಕೇಂದ್ರ ಪ್ರಾಯೋಜಿತ ಕಾರ್ಯಕ್ರಮವಾಗಿದ್ದು, ಇದು 10 ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಾರಂಭಗೊಂಡು 2006-07 ರ ಸಾಲಿನಲ್ಲಿ ಕೇಂದ್ರ, ರಾಜ್ಯಗಳ ಮಧ್ಯೆ 75 : 25 ರ ಅನುಪಾತದಲ್ಲಿ ಅನುದಾನ ಹಂಚಿಕೆಯಾಗಿದ್ದು, 11 ನೇ ಪಂಚವಾರ್ಷಿಕ ಯೋಜನೆಯ 2007-08 ನೇ ಸಾಲಿನಲ್ಲಿ ಇದು 65 : 35 ರ ಅನುಪಾತದಲ್ಲಿ ಜಾರಿಯಲ್ಲಿದೆ. ಈ ಕಾರ್ಯಕ್ರಮದಡಿ, ಶಾಲಾ ಸೌಲಭ್ಯಗಳು ಇಲ್ಲದ ಜನವಸತಿ ಪ್ರದೇಶಗಳಲ್ಲಿ, ಹೊಸ ಶಾಲೆಗಳನ್ನು ತೆರೆಯಲು ಮತ್ತು ಅಸ್ತಿತ್ವದಲ್ಲಿರುವ ಶಾಲೆಗಳನ್ನು ಸಬಲೀಕರಣಗೊಳಿಸಲು, ಶಾಲೆಗಳಿಗೆ ಹೆಚ್ಚುವರಿ ತರಗತಿ ಕೋಣೆಗಳು, ಶೌಚಾಲಯಗಳು, ಕುಡಿಯುವ ನೀರಿನ ಸೌಲಭ್ಯ ಇವುಗಳನ್ನು ಶಾಲಾ ನಿರ್ವಹಣಾ ಅನುದಾನ ಹಾಗೂ ಅಭಿವೃದ್ಧಿ ಅನುದಾನಗಳ ಮೂಲಕ ಒದಗಿಸುವ ಕಾರ್ಯಕ್ರಮಗಳನ್ನು ಒಳಗೊಂಡಿರುತ್ತದೆ. ಹೊಸ ಶಾಲೆ ಹಾಗೂ ಅವಶ್ಯ ಇರುವೆಡೆ ಮೇಲ್ದರ್ಜೆಗೇರಿಸಿದ ಪ್ರಾಥಮಿಕ ಶಾಲೆಗಳಿಗೆ ಹೆಚ್ಚುವರಿ ಅಧ್ಯಾಪಕರನ್ನು ಒದಗಿಸಲಾಗುತ್ತದೆ. ರಾಜ್ಯದ ಪ್ರಾಥಮಿಕ ಶಾಲೆಗಳ ಎಲ್ಲಾ ಅಧ್ಯಾಪಕರಿಗೂ ಆಳವಾದ ಹಾಗೂ ವಿಸ್ತರವಾದ ತರಬೇತಿಗಳನ್ನು ನೀಡಲಾಗುತ್ತಿದೆ. ಈ ತರಬೇತಿಗಳಲ್ಲಿ ಬೋಧನಾ ಕಲಿಕಾ ಸಾಮಗ್ರಿಗಳನ್ನು ಬಳಸುವ ಕೌಶಲಗಳನ್ನು ಬೆಳೆಸಲಾಗುತ್ತದೆ. ಜೀವನ ಕೌಶಲಗಳನ್ನು ಒಳಗೊಂಡಂತೆ ಗುಣಾತ್ಮಕ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವ ಉದ್ದೇಶವನ್ನು ಸರ್ವ ಶಿಕ್ಷಣ ಅಭಿಯಾನವು ಹೊಂದಿರುತ್ತದೆ. ಸರ್ವ ಶಿಕ್ಷಣ ಅಭಿಯಾನದಲ್ಲಿ ಸಾಮಾಜಿಕವಾಗಿ ಅವಕಾಶ ವಂಚಿತರ ಶಿಕ್ಷಣ, ಹೆಣ್ಣುಮಕ್ಕಳ ಶಿಕ್ಷಣ ಹಾಗೂ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ನೀಡಲಾಗುತ್ತದೆ.

ಶಾಲೆಗಳಿಗೆ ಅಗತ್ಯವಾದ ಮೂಲಭೂತ ಸೌಲಭ್ಯಗಳನ್ನು ಸರ್ವ ಶಿಕ್ಷಣ ಅಭಿಯಾನವು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮೂಲಕ ಅನುದಾನ ವಿತರಿಸಿ ಪೂರೈಸುತ್ತದೆ. ಈ ಸಮಿತಿಗಳು ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಪೋಷಕರ ಪರಿಷತ್ತಿನಿಂದ ಆಯ್ದುಕೊಂಡ ಸಮಿತಿ ಆಗಿರುತ್ತದೆ. ಹಾಗೂ ಇದು ಆ ಗ್ರಾಮದ ಪಂಚಾಯಿತಿಗೆ ಉತ್ತರದಾಯಿ ಆಗಿರುತ್ತದೆ.

## ಉದ್ದೇಶಗಳು

- ಜೆಂಡರ್ ಹಾಗೂ ಸಾಮಾಜಿಕ ವರ್ಗಗಳ ನಡುವಿನ ಅಂತರವನ್ನು 1-5 ನೇ ತರಗತಿಯವರೆಗಿನ ಶಿಕ್ಷಣದಲ್ಲಿ 2007 ರ ವೇಳೆಗೆ ಹಾಗೂ 1-7 ನೇ ತರಗತಿಯ ವರೆಗಿನ ಶಿಕ್ಷಣದಲ್ಲಿ 2010ರ ವೇಳೆಗೆ ಪೂರ್ಣವಾಗಿ ನಿವಾರಿಸುವುದು.
- 2010ರ ವೇಳೆಗೆ ಶಾಲೆಯಲ್ಲಿನ ಮಕ್ಕಳ ಉಳಿಕೆಯನ್ನು ಸಾರ್ವತ್ರೀಕರಿಸುವುದು.
- ಪ್ರಾಥಮಿಕ ಶಿಕ್ಷಣವು ಸಮುದಾಯದ ಒಡೆತನದಲ್ಲಿ ನಡೆಯುವುದರ ಜೊತೆಗೆ ಗುಣಾತ್ಮಕ ಶಿಕ್ಷಣವನ್ನು ನೀಡುವುದಕ್ಕೆ ವಿಶೇಷ ಗಮನ ವಹಿಸುವುದು.

## ರಾಜ್ಯದ ಸಾಮಾನ್ಯ ಸ್ಥಿತಿಗತಿ ವಿವರಣೆ.

| ಕ್ರ.ಸಂ | ಜಿಲ್ಲೆ/ರಾಜ್ಯ | ಜನ ಸಂಖ್ಯೆ 2001 | ಜನ ಸಂಖ್ಯೆ 2011 | ವ್ಯತ್ಯಾಸ | ಅನಕ್ಷರಸ್ತರ ಸಂಖ್ಯೆ | | |
|---|---|---|---|---|---|---|---|
| | | | | | 2001 | 2011 | ವ್ಯತ್ಯಾಸ |
| 1 | ಬೆಳಗಾಂ | 42.15 | 47.78 | 5.64 | 12.85 | 10.88 | 1.98 |
| 2 | ಬಾಗಲಕೋಟೆ | 16.52 | 18.91 | 2.39 | 5.92 | 4.98 | 0.94 |
| 3 | ಬಿಜಾಪುರ | 18.07 | 21.75 | 3.68 | 6.54 | 6.14 | 0.40 |
| 4 | ಬೀದರ್ | 15.02 | 17.00 | 1.98 | 4.93 | 4.30 | 0.63 |
| 5 | ರಾಯಚೂರು | 16.70 | 19.25 | 2.55 | 7.10 | 6.53 | 0.57 |
| 6 | ಕೊಪ್ಪಳ | 11.96 | 13.91 | 1.95 | 4.53 | 3.92 | 0.62 |
| 7 | ಗದಗ್ | 9.72 | 10.65 | 0.93 | 2.83 | 2.33 | 0.50 |
| 8 | ಧಾರವಾಡ | 16.04 | 18.47 | 2.43 | 3.94 | 3.22 | 0.71 |
| 9 | ಉತ್ತರ ಕನ್ನಡ | 13.54 | 14.37 | 0.83 | 2.76 | 2.06 | 0.70 |
| 10 | ಹಾವೇರಿ | 14.39 | 15.99 | 1.59 | 3.98 | 3.16 | 0.82 |
| 11 | ಬೆಳ್ಳಾರಿ | 20.27 | 25.32 | 5.05 | 7.28 | 7.04 | 0.23 |
| 12 | ಚಿತ್ರದುರ್ಗ | 15.18 | 16.60 | 1.42 | 4.66 | 3.88 | 0.78 |
| 13 | ದಾವಣಗೆರೆ | 17.91 | 19.47 | 1.56 | 5.05 | 4.12 | 0.93 |
| 14 | ಶಿವಮೊಗ್ಗ | 16.43 | 17.56 | 1.13 | 3.66 | 3.08 | 0.58 |
| 15 | ಉಡುಪಿ | 11.12 | 11.78 | 0.66 | 1.87 | 1.48 | 0.40 |
| 16 | ಚಿಕ್ಕಮಗಳೂರು | 11.41 | 11.38 | -0.03 | 2.79 | 2.15 | 0.63 |
| 17 | ತುಮಕೂರು | 25.85 | 26.81 | 0.97 | 7.52 | 6.24 | 1.29 |
| 18 | ಬೆಂಗಳೂರು | 65.37 | 95.89 | 30.52 | 9.80 | 9.90 | -0.10 |
| 19 | ಮಂಡ್ಯ | 17.64 | 18.09 | 0.45 | 6.08 | 4.92 | 1.16 |
| 20 | ಹಾಸನ್ | 17.22 | 17.76 | 0.55 | 4.78 | 3.91 | 0.87 |
| 21 | ದಕ್ಷಿಣ ಕನ್ನಡ | 18.98 | 20.84 | 1.86 | 2.77 | 2.14 | 0.63 |
| 22 | ಕೊಡಗು | 5.49 | 5.55 | 0.06 | 1.05 | 0.88 | 0.18 |
| 23 | ಮೈಸೂರು | 26.41 | 29.95 | 3.54 | 8.46 | 7.43 | 1.03 |
| 24 | ಚಾಮರಾಜನಗರ | 9.65 | 10.21 | 0.56 | 4.17 | 3.60 | 0.57 |
| 25 | ಗುಲ್ಬರ್ಗಾ | 21.75 | 25.65 | 3.90 | 12.98 | 7.60 | 5.37 |
| 26 | ಯಾದಗಿರಿ | 9.56 | 11.73 | 2.17 | 0.00 | 4.70 | -4.70 |
| 27 | ಕೋಲಾರ | 13.87 | 15.40 | 1.53 | 8.18 | 3.54 | 4.65 |
| 28 | ಚಿಕ್ಕಬಳ್ಳಾಪುರ | 11.49 | 12.54 | 1.05 | 0.00 | 3.38 | -3.38 |
| 29 | ಬೆಂಗಳೂರು ಗ್ರಾಮಾಂತರ | 8.51 | 9.87 | 1.36 | 5.84 | 1.92 | 3.92 |
| 30 | ರಾಮನಗರ | 10.31 | 10.83 | 0.52 | 0.00 | 3.02 | -3.02 |
| | **ರಾಜ್ಯದ ಮೊತ್ತ** | **528.51** | **611.31** | **82.80** | **152.33** | **132.46** | **19.88** |

| | |
|---|---|
| ಕ್ಷೇತ್ರ: | 1,91,791 ಸ್ಕ್ವೇರ್ ಕಿ.ಮೀ (ಭಾರತದಲ್ಲಿ 8ನೇಯ ದೊಡ್ಡ ರಾಜ್ಯ) |
| ಉದ್ದ: | ಉತ್ತರದಿಂದ ದಕ್ಷಿಣಕ್ಕೆ 760 ಕಿ.ಮೀ.ಗಳು |
| ಅಗಲ | ಪೂರ್ವ ದಿಂದ ಪಶ್ಚಿಮಕ್ಕೆ 420 ಕಿ.ಮೀ |
| ಜನಸಂಖ್ಯೆ: | 2011ರ ಗಣತಿಯಂತೆ ಸುಮಾರು 611.31 Crores. |
| ಹೆಣ್ಣು ಮಕ್ಕಳ ಹೋಲಿಕೆ ದರ 1000 ಗಂಡು ಮಕ್ಕಳಿಗೆ: | 973 ಹೆಣ್ಣು |
| ರಾಜಧಾನಿ: | ಬೆಂಗಳೂರು |
| ಸಾಕ್ಷರತೆ: | 75.60% |
| ಹೆಣ್ಣು ಮಕ್ಕಳ ಸಾಕ್ಷರತೆ: | 68.13% |
| ವಾತಾವರಣ: | |
| ಬೇಸಿಗೆ ಕಾಲ: | ಮಾರ್ಚ್ ಇಂದ ಮೇ ವರೆಗೆ (18$^{\circ}$ಸೆಲ್ಷಿಯಸ್ ನಿಂದ 40$^{\circ}$ಸೆಲ್ಷಿಯಸ್ ವರೆಗೆ) |
| ಚಳಿಗಾಲ: | ಅಕ್ಟೋಬರ್ ಇಂದ ಡಿಸೆಂಬರ್ ವರೆಗೆ (14$^{\circ}$ಸೆಲ್ಷಿಯಸ್ ನಿಂದ 38$^{\circ}$ಸೆಲ್ಷಿಯಸ್ ವರೆಗೆ) |
| ಮುಂಗಾರು ಮಳೆಗಾಲ: | ಜೂನ್ ನಿಂದ ಆಗಸ್ಟ್ |
| ಹಿಂಗಾರು ಮಳೆಗಾಲ: | ಅಕ್ಟೋಬರ್ ನಿಂದ ಡಿಸೆಂಬರ್ |
| ಮಳೆ ಪ್ರಮಾಣ: | 500 ಮಿಲಿ ಮೀಟರ್ ನಿಂದ 4000 ಮಿಲಿ ಮೀಟರ್ ವರೆಗೆ. ಸಹ್ಯಾದ್ರಿ ತಪ್ಪಲಿನ ಆಗುಂಬೆ ಮಳೆ ಪ್ರಮಾಣವು ಭಾರತದ ಎರಡನೇ ಸ್ಥಾನದಲ್ಲಿದೆ. (7600 ಮಿಲಿ ಮೀಟರ್) |
| ಭೌಗೋಳಿಕ ನಕ್ಷೆ: | ಸಮುದ್ರ ತೀರದಿಂದ ಕೂಡಿದ ಕರಾವಳಿ, ಪಶ್ಚಿಮ ಘಟ್ಟದಿಂದ ಕೂಡಿದ ಸಹ್ಯಾದ್ರಿ, ಪರಿವರ್ತನೆಯ ಮಧ್ಯದ ಮಲೆನಾಡು, ದಕ್ಷಿಣ ಮತ್ತು ಉತ್ತರದ ಪ್ರಸ್ಥ ಭೂಮಿ, ಪೂರ್ವ ಘಟ್ಟಗಳನ್ನು ಒಳಗೊಂಡಿದೆ. |
| ಭಾಷೆ: | ಕನ್ನಡ, ತೆಲುಗು, ತಮಿಳು, ಉರ್ದು, ಮರಾಠಿ, ತುಳು, ಕೊಡವ, ಕೊಂಕಣಿ, ಹಿಂದಿ ಭಾಷೆಗಳು ಬಳಕೆಯಲ್ಲಿವೆ. |

**ಜನಸಂಖ್ಯೆಯ ಹಂಚಿಕೆ:**

ಪ್ರತಿ ಸ್ಕ್ವೇರ್ ಕಿ.ಮೀ ಗೆ ಅತ್ಯಂತ ಹೆಚ್ಚಿನ ಜನಸಂಖ್ಯೆ ಇರುವ ಜಿಲ್ಲೆಗಳೆಂದರೆ: ಬೆಂಗಳೂರು ನಗರ (4381), ಮೈಸೂರು (476), ಧಾರವಾಡ (434), ಬೆಂಗಳೂರು ಗ್ರಾಮಾಂತರ (431) ದಕ್ಷಿಣ ಕನ್ನಡ (430) ಹಾಗೂ ಅತ್ಯಂತ ಕಡಿಮೆ ಜನ ಸಂಖ್ಯೆ ಇರುವ ಜಿಲ್ಲೆಗಳು, ಚಿಕ್ಕಮಗಳೂರು (158), ಉತ್ತರ ಕನ್ನಡ (140), ಕೊಡಗು (135).

ರಾಜ್ಯದ ಇತರೆ ಜಿಲ್ಲೆಗಳಲ್ಲಿರುವ ಜನಸಂಖ್ಯೆಯೆಂದರೆ:, ಕೋಲಾರ (386), ಮಂಡ್ಯ (364), ಬೆಳಗಾಂ (356), ಹಾವೇರಿ (331), ದಾವಣಗೆರೆ (328), ಬೀದರ್ (313), ಉಡುಪಿ (329), ರಾಮನಗರ (308), ಚಿಕ್ಕಬಳ್ಳಾಪುರ (296), ಬಾಗಲಕೋಟೆ (288), ಹಾಸನ (261), ತುಮಕೂರು (253), ಕೊಪ್ಪಳ (250), ಗುಲ್ಬರ್ಗಾ(234), ಗದಗ (229), ರಾಯಚೂರು (228), ಯಾದಗಿರಿ (223), ಬಿಜಾಪುರ (207), ಶಿವಮೊಗ್ಗ (207), ಚಾಮರಾಜನಗರ (181), ಚಿತ್ರದುರ್ಗ (197)